ಓ ಎಸ್ ನಂ.56/2022

ಪಿ.ಡಬ್ಲ್ಯೂ-2 ಬೋರಮ್ಮ ಗಂಡ ಸಿದ್ದಣ್ಣ

**(ಇಂದು ದಿನಾಂಕಃ 15-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ೧, ೨, ೪ ರಿಂದ ೮ನೇ ಪ್ರತಿವಾದಿಗಳ ಪರ ಶ್ರೀ ಕೆ ಜಿ ಪಿ ವಕೀಲರಿಂದ.

ನನ್ನ ಮಾವನ ಹೆಸರು ಭಗವಂತರಾಯ ಆಗಿರುತ್ತದೆ. ನನ್ನ ಅತ್ತೆಯ ಹೆಸರು ಸಿದ್ದಮ್ಮ ಆಗಿರುತ್ತದೆ. ನನ್ನ ಮಾವ ಭಗವಂತರಾಯರವರಿಗೆ ಶಂಕ್ರಪ್ಪ, ಸಿದ್ದಣ್ಣ, ಚಿಂತರಾಯ, ಗೊಲ್ಲಾಳ, ಶಿಲ್ಲೇದಾರ ಹಾಗೂ ಮಹಾದೇವ್ ಎಂಬ ೬ ಜನ ಗಂಡು ಮಕ್ಕಳು ಮತ್ತು ಬಾಗಮ್ಮ ಎಂಬ ಒಬ್ಬಳು ಹೆಣ್ಣುಮಗಳು ಇರುತ್ತಾರೆ. ನನ್ನ ಗಂಡ ೧೧ ಎಕರೆ ಜಮೀನು ದುಡಿದು ಗಳಿಸಿರುತ್ತಾರೆ ಮತ್ತು ೧ ಪ್ಲಾಟ್ ಕೂಡಾ ಖರೀದಿಸಿರುತ್ತಾರೆ. ೧೬ ಎಕರೆ ಜಮೀನು ನನ್ನ ಗಂಡ ಮತ್ತು ಅವರ ಅಣ್ಣತಮ್ಮಂದಿರು ಸೇರಿ ತೆಗೆದುಕೊಂಡಿರುತ್ತಾರೆ. ನಾವು ಇನ್ನೂ ವಿಭಾಗ ಆಗಿರುವುದಿಲ್ಲ. ಮಂಗಳೂರಿನಲ್ಲಿ ನಮಗೆ ೧ ಮನೆಯನ್ನು ಕೊಟ್ಟಿರುತ್ತಾರೆ. ಉಳಿದ ೩ ಮನೆಗಳನ್ನು ನನ್ನ ಮೈದುನನಾದ ಚಿಂತರಾಯ ಇಟ್ಟುಕೊಂಡಿರುತ್ತಾರೆ. ಘತ್ತರಗಿಯಲ್ಲಿ ೩ ಮನೆಗಳು ಇರುತ್ತವೆ. ಅವುಗಳ ನಂಬರ ನನಗೆ ಹೇಳಲು ಬರುವುದಿಲ್ಲ. ಅವುಗಳ ಅಳತೆಯನ್ನು ಹೇಳಲು ಬರುವುದಿಲ್ಲ. ಅವು ಯಾರ ಹೆಸರಿನಲ್ಲಿ ಇವೆ ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಘತ್ತರಗಿಯಲ್ಲಿ ನನ್ನ ಗಂಡನ ಹೆಸರಿನಲ್ಲಿ ಕಟ್ಟಿದ ಮನೆ ಮತ್ತು ೧ ಪ್ಲಾಟ ಇರುತ್ತವೆ ಎನ್ನುತ್ತಾರೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

೨. ನಮಗೆ ಸಾಗುವಳಿ ಮಾಡಲು ೪ ಎಕರೆ ಜಮೀನು ನೀಡಿರುತ್ತಾರೆ. ನನ್ನ ಗಂಡನ ಮೊದಲನೆಯ ಹೆಂಡತಿಯ ಸಹಿಯನ್ನು ಮೋಸದಿಂದ ೧೧ ಎಕರೆ ಜಮೀನಿನ ಕುರಿತು

ಪ್ರತಿವಾದಿಗಳು ಪಡೆದುಕೊಂಡಿರುತ್ತಾರೆ. ನನ್ನ ಗಂಡನ ಮೊದಲನೆ ಹೆಂಡತಿಯಾದ ಬಸಮ್ಮರವರ ಹೆಸರಿನಲ್ಲಿ ಪ್ಲಾಟ ಕೂಡಾ ಇದೆ ಎಂದರೆ ಸರಿ. ದಾವಾ ಆಸ್ತಿಗಳ ಸರ್ವೆ ನಂಬರ ನನಗೆ ಹೇಳಲು ಆಗುವುದಿಲ್ಲ.

೩. ದಾವಾ ಜಮೀನುಗಳಲ್ಲಿ ಈಗಾಗಲೇ ಪಾಲು ಆಗಿ, ನನ್ನ ಗಂಡನಿಗೆ ೪ ಎಕರೆ ಜಮೀನು ಪಾಲಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮೋಸದಿಂದ ಸಹಿಯನ್ನು ಪಡೆದಿರುತ್ತಾರೆ. ನನ್ನ ಗಂಡನು ಸ್ವತ: ಗಳಿಸಿದ ೧೧ ಎಕರೆ ಜಮೀನು ಇರುತ್ತದೆ ಎನ್ನುತ್ತಾರೆ. ಸುಮಾರು ೨೬ ವರ್ಷಗಳ ಹಿಂದೆ ನನ್ನ ಮದುವೆ ಆಗಿರುತ್ತದೆ. ನನ್ನ ಗಂಡನಾದ ಸಿದ್ದಣ್ಣನು ಕುಡಿತದ ಚಟಕ್ಕೆ ಒಳಗಾಗಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಇಸ್ಪೀಟ್ ಮತ್ತು ಜೂಜಾಟ ಆಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಅವರ ಅಣ್ಣತಮ್ಮಂದಿರು ಜಂಟಿಯಾಗಿ ಜಮೀನನ್ನು ನನ್ನ ಗಂಡನ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸರಿಯಲ್ಲ. ಜಮೀನು ಖರೀದಿಸುವಾಗ ನನ್ನ ಗಂಡನಿಗೆ ಮಕ್ಕಳು ಆಗಿರಲಿಲ್ಲ ಎಂದರೆ ಸರಿ.

೪. ಸರ್ವೆ ನಂಬರ ೧೧೯ ರ ಜಮೀನಿನಲ್ಲಿ ೪ ಎಕರೆ ಜಮೀನನ್ನು ಶ್ರೀದೇವಿ ಗಂಡ ಚಂದಪ್ಪ ನಾಯ್ಕೋಡಿರವರಿಗೆ ಮಾರಾಟ ಆಗಿದೆ ಎಂದರೆ ಸರಿಯಲ್ಲ. ನಿಪಿ-೪೩ ರಿಂದ ೪೫ ರ ಪಹಣಿಗಳಲ್ಲಿ ಆ ಕುರಿತು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ಈಗಾಗಲೇ ಪಾಲು ಆಗಿ ತಲಾ ೪ ಎಕರೆ ಜಮೀನು ಬಂದಿರುತ್ತವೆ ಎಂದರೆ ಸರಿಯಲ್ಲ. ನನ್ನ ಗಂಡನ ಸಹೋದರನಾದ ಮಹಾದೇವಪ್ಪರವರು ದತ್ತಕಕ್ಕೆ ಹೋಗಿರುತ್ತಾರೆ. ಆ ಕುರಿತು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ.

೫. ನಾನು ವಂಶಾವಳಿ ದಾಖಲೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡ ಕುಡಿತದ ಚಟಕ್ಕೆ ಒಳಗಾಗಿ ಇಸ್ಪೀಟ್ ಮತ್ತು ಜೂಜಾಟ ಆಡಿ ಸಾಕಷ್ಟು ಸಾಲ ಮಾಡಿದ್ದ ಎಂದರೆ ಸರಿಯಲ್ಲ. ನನ್ನ ಗಂಡನ ಲೀವರ್ ಹಾಳಾಗಿ ಆಸ್ಪತ್ರೆಯಲ್ಲಿ ಮೃತನಾಗಿದ್ದ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಗಂಡ ಹೃದಯಾಘಾತದಿಂದ ಮನೆಯಲ್ಲಿ ಮೃತನಾಗಿದ್ದ ಎನ್ನುತ್ತಾರೆ. ನನ್ನ ಗಂಡ ಮೃತನಾದಾಗ ನಾನು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಅಂತ್ಯ ಸಂಸ್ಕಾರವನ್ನು ಘತ್ತರಗಿಯಲ್ಲಿ ಮಾಡಲಾಗಿದೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ಗಂಡನ ಆಸ್ತಿ ನಮಗೆ ಬರಬೇಕು ಎಂದು ಬರೆಸಿ ಹಾಕಿರುತ್ತೇವೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳನ್ನು ನಾನು ಶಾಲೆ ಕಲಿಯದ ಕಾರಣ ನನಗೆ ಹೇಳಲು ಆಗುವುದಿಲ್ಲ. ನನ್ನ ಗಂಡನ ಅಣ್ಣತಮ್ಮಂದಿರು ಸೇರಿ ನನ್ನ ಗಂಡನ ಹೆಸರಿನಲ್ಲಿ ಅವರಿಗೆ ಮದುವೆ ಮಾಡಲು ಹೆಣ್ಣು ಕೊಡಲಿ ಎಂಬ ವಿಚಾರದಿಂದ ಜಮೀನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಗಂಡ ದುಡಿದು ಸದರಿ ಜಮೀನು ಗಳಿಸಿದ್ದರು ಎನ್ನುತ್ತಾರೆ. ನನ್ನ ಗಂಡನ ಮೊದಲನೆಯ ಹೆಂಡತಿಗೆ ಮಕ್ಕಳಾಗದ ಕಾರಣ ನನ್ನ ಗಂಡನಿಗೆ ನನ್ನನ್ನು ಎಲ್ಲರು ಸೇರಿ ಒಪ್ಪಿಗೆಯಿಂದ ಮದುವೆ ಮಾಡಿರುತ್ತಾರೆ. ನನ್ನ ಗಂಡನ ಮತ್ತು ಅವರ ಮೊದಲನೆಯ ಹೆಂಡತಿಯ ಮಧ್ಯ ಯಾವುದೇ ವಿಚ್ಛೇದನ ಆಗಿರುವುದಿಲ್ಲ. ನಾನು ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.